

ರಘುನಾಥ ಚ.ಹ.

ಚಿತ್ರ: ಕಿರಗೂರಿನ ಗಯ್ಯಾಳಿಗಳು
ನಿರ್ದೇಶಕಿ: ಸುಮನ್ ಕಿತ್ತೂರು
ಭಾಷೆ: ಕನ್ನಡ

# ಕಿರಗೂರು ಕುಡಿಯಂಗ ಹಬ್ಬಲಿ ಗಯ್ಯಾಳಿಗಳ ರಸಬಳ್ಳಿ

ಆಧುನಿಕ ಜಗತ್ತಿನ ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಚಿತ್ರರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತದ ಬೆಳ್ಳಿತೆರೆಯಲ್ಲಿ ದಾಖಲಾದ, ಮನಸ್ಸನ್ನು ಸೂರೆಗೊಂಡ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ.

'ಕಳ್ಳರಸಂತೆ', 'ಸ್ಲಂಬಾಲ', 'ಎದೆಗಾರಿಕೆ' ಸಿನಿಮಾಗಳ ಮುಂದುವರಿಕೆ 'ಕಿರಗೂರಿನ ಗಯ್ಯಾಳಿಗಳು'. ಇದು ವಿನೋದದ ಮಾತೂ ಹೌದು, ಸಾಮ್ಯತೆಯ ಅಂಶವೂ ಹೌದು. ಈ ನಾಲ್ಕೂ ಸಿನಿಮಾಗಳ ಹಿನ್ನೆಲೆಯಲ್ಲಿ ಸುಮನ್ ಕಿತ್ತೂರ್ ಅವರನ್ನು 'ರೌಡಿಸಂ ಚಿತ್ರಗಳ ನಿರ್ದೇಶಕಿ' ಎಂದು ತಮಾಷೆಯಾಗಿಯೂ ಗಂಭೀರವಾಗಿಯೂ ಕರೆಯಬಹುದು.

ಸುಮನ್ ನಿರ್ದೇಶನದ ಮೊದಲ ಮೂರು ಸಿನಿಮಾಗಳ ಕೇಂದ್ರಪಾತ್ರಗಳು – ಕಳ್ಳಕಾಕರು ಹಾಗೂ ಭೂಗತಲೋಕದ ಪಾತಕಿಗಳು. ನಾಲ್ಕನೇ ಚಿತ್ರದ ಶೀರ್ಷಿಕೆಯಲ್ಲಿನ 'ಗಯ್ಯಾಳಿಗಳು' ಎನ್ನುವ ವಿಶೇಷಣವೇ ಚಿತ್ರದ ಹೂರಣವನ್ನು ಹೇಳುವಂತಿದೆ. ಇದು ಕನ್ನಡದ ಜನಪ್ರಿಯ